**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ. ದಂ.ಯವರ ನ್ಯಾಯಾಲಯ, ಕುಂದಾಪುರ**

**ಸಿ.ಸಿ ನಂಬ್ರಃ 1109/2020**

ಸರ್ಕಾರದ ಪರವಾಗಿ
ಗಂಗೊಳ್ಳಿ ಠಾಣಾ ಪೋಲಿಸರು --- ಪಿರ್ಯಾದಿದಾರರು

ಕಾರ್ತಿಕ್, 44 ವರ್ಷ,
ತಂದೆಃ ದಿ. ವಿಶ್ವನಾಥ ಜೋಗಿ,
ವಾಸಃ ಕದ್ರಿ ಮುಂಡಾನ್,
ಕೆಳಗಿನ ಹಿತ್ಲು, ಬಿಜೈ ಪೋಸ್ಟ್,
ಮಂಗಳೂರು. --- ಆರೋಪಿ

**ಃಆವಾದನೆಃ**

**ಶ್ರೀಮತಿ ಶ್ರುತಿ ಶ್ರೀ ಎಸ್. ಬಿ.ಎ., ಎಲ್.ಎಲ್.ಬಿ., ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ,. ಕುಂದಾಪುರ ಆದ ನಾನು ಆರೋಪಿತರಾದ ನಿಮಗೆ ಈ ಮೂಲಕ ಮಾಡುವ ಆವಾದನೆ ಏನೆಂದರೆಃ**

ದಿ. 21.10.2019 ರಂದು ಮಧ್ಯಾಹ್ನ 3.45 ಗಂಟಗೆ ಸೀತಾರಾಮ ಐತಾಳ್ ಎಂಬವರು ತ್ರಾಸಿ ಗ್ರಾಮದ ತ್ರಾಸಿ ಜಂಕ್ಷನ್ ಬಳಿ ರಾ.ಹೆ.66 ರ ಪಶ್ಚಿಮ ಬದಿಯಲ್ಲಿ ನಿಂತುಕೊಂಡಿರುವಾಗ ಕುಂದಾುರ ಕಡೆಯಿಂದ ಬೈಂದೂರು ಕಡೆಗೆ ಕೆಎ 19 ಎ.ಸಿ. 1285 ನೇ ಟ್ಯಾಂಕರನ್ನು ಆರೋಪಿತರಾದನೀವು ಅತಿವೇಗ ಹಾಗೂ ಅಜಾಗರೂಕತೆಯಿಂದ ಮಾನವ ಜೀವಕ್ಕೆ ಅಪಾಯವುಂಟಾಗುವ ರೀತಿಯಲ್ಲಿ ಚಾಲನೆ ಮಾಡಿದ್ದು, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 279 ರ ಕೆಳಗೆ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಮಾಡಿರುವಿರಿ.

ಮೇಲ್ಕಂಡ ದಿನ, ಸಮಯ ಹಾಗೂ ಸ್ಥಳದಲ್ಲಿ ಆಪಾದಿತರಾದ ನೀವು ಈ ಮೇಲೆ ತಿಳಿಸಿದ ನಿಮ್ಮ ವಾಹನವನ್ನು ಮೇಲೆ ಹೇಳಿದ ರೀತಿಯಲ್ಲಿ ಚಲಾಯಿಸಿಕೊಂಡು ಬಂದು ರಸ್ತೆಯ ಎಡಭಾಗಕ್ಕೆ ಚಲಾಯಿಸಿ ಸೀತಾರಾಮ ಐತಾಳ್ ರವರಿಗೆ ನೇರ ಡಿಕ್ಕಿ ಹೊಡೆದ ಪರಿಣಾಮ ರಸ್ತೆಗೆ ಬಿದ್ದ ಸೀತಾರಾಮ ಐತಾಳ್ ರ ತಲೆಗೆ, ಮೂಗಿಗೆ, ಕಾಲುಗಳಿಗೆ ತೀವ್ರ ತರಹದ ಜಖಂಗೊಂಡವರನ್ನು ಚಿಕಿತ್ತೆಯ ಬಗ್ಗೆ ಮಣಿಪಾಲ ಕೆ.ಎಂ.ಸಿ. ಆಸ್ಪತ್ರೆಗೆ ದಾಖಲಿಸಿದಲ್ಲಿ ಚಿಕಿತ್ಸೆ ಫಲಕಾರಿಯಾಗದೆ ದಿ. 21.10.2019 ರಂದು ರಾತ್ರಿ 11.56 ಗಂಟೆಗೆ ಮೃತಪಟ್ಟಿದ್ದು, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 304 (ಎ)ರ ಕೆಳಗೆ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಮಾಡಿರುವಿರಿ.

(ಸದರಿ ಆರೋಪಗಳ ಕುರಿತಂತೆ ನೀವು ಈ ನ್ಯಾಯಾಲಯದಿಂದ ವಿಚಾರಣೆಗೆ ಗುರಿಯಾಗಬೇಕೆಂದು ನಾನು ಈ ಮೂಲಕ ನಿರ್ದೇಶಿಸುತ್ತೇನೆ )

ದಿನಾಂಕ :26.12.2024

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾ.ದಂ., ಕುಂದಾಪುರ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ನ್ಯಾಯಾಲಯ, ಕುಂದಾಪುರ

**ಸಿ.ಸಿ. ಸಂಖ್ಯೆ :1109/2020**

ಫಿರ್ಯಾದುದಾರರು : ಸರಕಾರದ ಪರವಾಗಿ ಗಂಗೊಳ್ಳಿ ಠಾಣಾ ಪೋಲಿಸರು,

**- ವಿರುದ್ಧ-**

ಆರೋಪಿ : ಕಾರ್ತಿಕ್, ತಂದೆ: ದಿ. ವಿಶ್ವನಾಥ ಜೋಗಿ,

1. ಮೇಲೆ ಹೇಳಿದಂತೆ ನಿಮಗೆ ಓಡಿ ಹೇಳಿ ವಿವರಿಸಿದ ಆಪಾದನೆಯ ಸಾರಾಂಶವನ್ನು ಅರ್ಥಮಾಡಿಕೊಂಡಿರಾ?

ಉ.

2. ಅಪರಾಧವನ್ನು ಒಪ್ಪಿ ಕೊಳ್ಳುವಿರಾ ಅಥವಾ ನಿಮ್ಮ ಪರ ಪ್ರತಿರಕ್ಷೆ ಇದೆಯಾ.?

ಉ.

ಮೇಲ್ಕಂಡ ಆಪಾದನೆಯ ಸಾರಾಂಶವನ್ನು ಆರೋಪಿಗೆ ತಿಳಿದ ಭಾಷೆಯಲ್ಲಿ ತೆರೆದ ನ್ಯಾಯಾಲಯದಲ್ಲಿ ಓದಿ ಹೇಳಿ ಆರೋಪಿ ಕೊಟ್ಟ ಉತ್ತರವನ್ನು ಬರೆದುಕೊಂಡಿದ್ದು ಅವು ಸರಿಯಾಗಿರುತ್ತವೆಂದು ಈ ಮೂಲಕ ದೃಢಿಕರಿಸುತ್ತೇನೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಕುಂದಾಪುರ.